# ಮೂರನೆಯ ಸಹಸ್ರಮಾನದಲ್ಲಿ ವೇದಾಂತ

ಡಾ.ಕೆ.ಬಿ ಪ್ರಭುಪ್ರಸಾದ

**ಮೂರನೆ ಸಹಸ್ರಮಾನದಲ್ಲಿ ಜಗತ್ತಿನ ಸಾಂಸ್ಕೃತಿಕ ಪರಿವರ್ತನೆಯಲ್ಲಿ ವೇದಾಂತದ ಪಾತ್ರವೇನು ಎಂಬ ಚರ್ಚೆಯನ್ನೊಳಗೊಂಡ ವಿಶೇಷ ಧಾರ್ಮಿಕ ಸಮಾವೇಶ ಷಿಕಾಗೊದಲ್ಲಿ ನಡೆಯಿತು. ಶ್ರೇಷ್ಠ ಸಾಹಿತಿಗಳಾದ ಶ್ರೀ ಪ್ರಭುಪ್ರಸಾದರು ಆ ಸಮಾವೇಶದ ಸಂಕ್ಷಿಪ್ತ ವರದಿಯನ್ನು ನೀಡುತ್ತ ಅದರ ವೈಶಿಷ್ಟ್ಯವನ್ನೂ ಮಹತ್ವವನ್ನೂ ವಿವರಿಸಿರುವರು.**

ಕ್ರಿ.ಶ.೧೮೯೩ನೆ ವರ್ಷ ಅಮೆರಿಕದ ಇತಿಹಾಸದಲ್ಲಿ ಚಿರಸ್ಮರಣೀಯವಾಯಿತು. ಅಮೆರಿಕ ಹೊಸ ಭೂಖಂಡವನ್ನು ಕೊಲಂಬಸ್ ಕಂಡುಹಿಡಿದು ನಾಲ್ಕುನೂರು ವರ್ಷ ತುಂಬಿದ್ದವು. ಇದರ ಉತ್ಸವಾಚರಣೆಯನ್ನು ಅರ್ಥಪೂರ್ಣವನ್ನಾಗಿ ಮಾಡಲು ಷಿಕಾಗೊ ನಗರದಲ್ಲಿ ಒಂದು ಅಭೂತಪೂರ್ವ ಕಾರ್ಯಕ್ರಮವನ್ನು ಅಲ್ಲಿನ ಚಿಂತನಶೀಲ ಮುಂದಾಳುಗಳು ಯೋಜಿಸಿದರು. ಅದರಂತೆ ಜಗತ್ತಿನ ಎಲ್ಲ ಮುಖ್ಯಧರ್ಮಗಳ ಸಮ್ಮೇಳನ ಸೆಪ್ಟೆಂಬರ್ ೧೧ ರಿಂದ ೨೭ರವರೆಗೆ ನಗರದ "ಆರ್ಟ್ ಪ್ಯಾಲೆಸ್" ಸಭಾಂಗಣದಲ್ಲಿ ನಡೆಯಿತು. ವಿಶ್ವದಲ್ಲೇ ಇದೊಂದು ಮಹತ್ವದ ಐತಿಹಾಸಿಕ ಘಟನೆ.

ವಿಶ್ವಶಾಂತಿ ಮತ್ತು ಮಾನವರೆಲ್ಲರ ಸಾಮರಸ್ಯದ ಸಹಬಾಳ್ವೆಯ ಆದರ್ಶಗುರಿಯನ್ನು ಸಾಧಿಸುವ ಮುನ್ನಡೆಯಲ್ಲಿ ಧರ್ಮಗಳ ಪಾತ್ರ ಏನು ಎಂಬುದನ್ನು ಪ್ರಪಂಚದ ಪ್ರಮುಖಧರ್ಮಗಳ ಪ್ರತಿನಿಧಿಗಳಾಗಿ ನಾನಾದೇಶಗಳಿಂದ ಬಂದ ಧಾರ್ಮಿಕ ನಾಯಕರು, ಧರ್ಮಗುರುಗಳು ಆ ಸಮಾವೇಶದಲ್ಲಿ ಚರ್ಚಿಸಿದರು. ಧಾರ್ಮಿಕ ಶ್ರದ್ಧೆ ಆಸಕ್ತಿ ಇದ್ದ ಸಹಸ್ರಾರು ಜನ ವಿಚಾರವಂತರೂ ಭಕ್ತರೂ ಸಾಮಾನ್ಯರೂ ಸಭಿಕರಾಗಿ ಅಲ್ಲಿ ನೆರೆದಿದ್ದರು.

ಅಧಿವೇಶನದ ಮೊದಲ ದಿನ ಕೆಲವೇ ನಿಮಿಷಗಳು ಮಾತಾಡಿದರೂ, ಎಲ್ಲರ ಮನವನ್ನೂ ಸೆಳೆದು ಅವರ ಹೃದಯಗಳಲ್ಲಿ "ಧರ್ಮ"ದ ಬಗ್ಗೆ ಹೊಸ ಬೆಳಕನ್ನು ಚೆಲ್ಲಿದವರು ಭಾರತದ ಹಿಂದೂಧರ್ಮದ ಪ್ರತಿನಿಧಿ ಸ್ವಾಮಿ ವಿವೇಕಾನಂದರು. ಕಾಲಮಾನದಿಂದ ಜಗತ್ತಿನ ಅತ್ಯಂತ ಕಿರಿಯ ರಾಷ್ಟ್ರದ ಜನತೆಗೆ ಜಗತ್ತಿನ ಅತ್ಯಂತ ಪ್ರಾಚೀನ ಹಾಗೂ ಹಿರಿಯ ಹಿಂದೂಧರ್ಮದ ತಿರುಳನ್ನು ಪರಿಚಯಿಸುತ್ತ, ಸ್ವಾಮೀಜಿ ಪ್ರಪ್ರಥಮ ಬಾರಿಗೆ ಸಮಸ್ತ ಪಾಶ್ಚಾತ್ಯ ಜಗತ್ತಿಗೆ—ಆ ಮೂಲಕ ಇಡೀ ಜಗತ್ತಿಗೆ "ವೇದಾಂತ"ದ ಉದಾತ್ತ ಸಂದೇಶವನ್ನು ತಿಳಿಯಪಡಿಸಿದರು. ಅಮೆರಿಕದ ಹೊಚ್ಚ ಹೊಸ ಮನದ ನೆಲದಲ್ಲಿ ವೇದಾಂತದ ಬೀಜವನ್ನು ನೆಟ್ಟರು.

ಇನ್ನೇನು ನೂರು ವರ್ಷಗಳಲ್ಲಿ ಉದಯಿಸಲಿದ್ದ ಮೂರನೆ ಸಹಸ್ರಮಾನದಲ್ಲಿ ಮನುಕುಲ ಧರ್ಮದ ಬೆಳಕಿನಲ್ಲಿ ಯಾವ ರೀತಿ ತಮ್ಮ ಜೀವನಶೈಲಿಯನ್ನು ರೂಪಿಸಿಕೊಂಡರೆ ಸಮಸ್ತ ಮಾನವಜನಾಂಗ ಶಾಂತಿ-ಸಾಮರಸ್ಯಗಳಿಂದ ಸುಖವಾಗಿ ಬಾಳಬಹುದು ಎಂಬುದರ ದಿಕ್ಸೂಚಿಯಾಯಿತು, ಸ್ವಾಮೀಜಿ ಈ ಸಂದರ್ಭದಲ್ಲಿ ಪ್ರಸ್ತುತಪಡಿಸಿದ ಶ್ರೀರಾಮಕೃಷ್ಣ ಪರಮಹಂಸರ ದಿವ್ಯಸಂದೇಶ.

ಸ್ವಾಮೀಜಿ ವೇದಾಂತಕ್ಕೊಂದು ಹೊಸ ಅರ್ಥವನ್ನು ಕೊಟ್ಟು, ಪೌರಸ್ತ್ಯ-ಪಾಶ್ಚಾತ್ಯ ಚಿಂತನಶೀಲರು ಮಾತ್ರವಲ್ಲ ಸಂಪ್ರದಾಯವಾದಿ ವೈದಿಕರೂ, ಹಿಂದೂಗಳೂ ಕಣ್ಣು ತೆರೆಯುವಂತೆ ಮಾಡಿದ್ದಾರೆ. ಹಳೆಯ ಧರ್ಮವನ್ನು ಪರಿಷ್ಕರಿಸಿ ಹೊಸ ಧರ್ಮವನ್ನಾಗಿ ಮಾಡಿದ್ದಾರೆ. ಈ ಹೊಸ ಅರ್ಥದ ವೇದಾಂತ ಅಂದರೆ ಅದ್ವೈತ ಜೀವನತತ್ವ ಹಾಗೂ ಮನೋಧರ್ಮ ವಾಸ್ತವ ಬದುಕಿನಲ್ಲಿ ಅಳವಡಿಸಿಕೊಳ್ಳಲು ಆಚರಿಸಲು ಸುಲಭಸಾಧ್ಯ ಎಂಬುದನ್ನು ಮನಗಾಣಿಸಿ ಇದನ್ನು "ಅನುಷ್ಠಾನ ವೇದಾಂತ" ಎಂದು ಕರೆದಿದ್ದಾರೆ.

ಹೀಗೆ ಸ್ವಾಮೀಜಿ ೧೦೮ ವರ್ಷಗಳ ಕೆಳಗೆ ಅಮೆರಿಕದ ಹೊಸ ನೆಲದಲ್ಲಿ ನೆಟ್ಟ ವೇದಾಂತದ ಬೀಜ ಅಂಕುರಿಸಿ ಕಾಲಕ್ರಮದಲ್ಲಿ ಸಸಿಯಾಗಿ ಮರವಾಗಿ ಬೆಳೆದು ತನ್ನ ಶಾಖೆಗಳನ್ನು ಹಲವಾರು ಕಡೆ ಚಾಚಿದೆ. ಅಮೆರಿಕದ ಉದ್ದಗಲಗಳಲ್ಲಿ ಕಳೆದ ನೂರು ವರ್ಷಗಳಲ್ಲಿ, ನಿಧಾನಗತಿಯಲ್ಲಾದರೂ ದೃಢವಾಗಿ, ಬೆಳೆಬೆಳೆದು ಪ್ರೌಢ ಮತಿಗಳ ಗಮನವನ್ನು ಸೆಳೆದಿದೆ. ಜನ ಸಾಮಾನ್ಯರಲ್ಲಿ ಅಷ್ಟಾಗಿ ಪ್ರಚುರಗೊಂಡಿಲ್ಲವಾದರೂ ಶ್ರೀರಾಮಕೃಷ್ಣ-ವಿವೇಕಾನಂದ ಆಶ್ರಮ ಕೇಂದ್ರಗಳಿರುವ ಕಡೆಗಳಲ್ಲೆಲ್ಲ ವೇದಾಂತ ಸಂಘ, ಸತ್ಸಂಗ ಬಳಗ, ಅಧ್ಯಯನ ಗೋಷ್ಠಿಗಳನ್ನು ರಚಿಸಿಕೊಂಡಿರುವ ಭಕ್ತರು ಸಾಮಾನ್ಯ ನಾಗರಿಕರನ್ನೂ ಈಗ ಆಕರ್ಷಿಸುತ್ತಿದ್ದಾರೆ.

ವಿಜ್ಞಾನದ ಮುನ್ನಡೆ ಜಗತ್ತನ್ನು ಕಿರಿದಾಗಿಸುತ್ತ ಏಕೀಕೃತಗೊಳಿಸುತ್ತಿರುವಂತೆ, ಧರ್ಮವಾದರೊ ಸಮಸ್ತ ಮಾನವ ಪ್ರಪಂಚದ ಭಾವೈಕ್ಯತೆಯನ್ನು ಸಾಧಿಸುವಲ್ಲಿ ಯಶಸ್ವಿ ಆಗಬೇಕಾಗಿತ್ತು. ವೇದಾಂತದ ಗುರಿ ಇದು. ಆದರೆ ಕೆಲವು ಮತಾಂಧರ, ಮೂಲಭೂತ ವಾದಿಗಳ ಸಂಘಟನಾ ಬಲ, ಮನೋವಿಕಾರದ ಹುಚ್ಚು ಆವೇಶ, ಕ್ರೋಧ, ಹಿಂಸಾಚಾರ, ಭಯೋತ್ಪಾದನೆಗಳಿಂದಾಗಿ, ಮತ್ತು ಅವುಗಳಿಂದ ಪೀಡಿತರಾದವರ ಉಗ್ರ ಪ್ರತಿಕ್ರಿಯೆಗಳಿಂದಾಗಿ ಇಡೀ ಲೋಕ ಕ್ಷೋಭೆ, ಅಶಾಂತಿ ನಿರಂತರ ಘರ್ಷಣೆಗಳಲ್ಲಿ ಮುಳುಗಿದೆ. ಮನುಕುಲ ವಿನಾಶದಂಚಿನಲ್ಲಿ ನಿಂತು ತತ್ತರಿಸುತ್ತಿದೆ. ಎರಡನೆ ಸಹಸ್ರಮಾನ ಮುಗಿದು ಮೂರನೆಯ ಸಹಸ್ರಮಾನಕ್ಕೆ ಕಾಲಿಡುತ್ತಿರುವ ಪ್ರಪಂಚ ಶಾಂತಿಯುತ ಸಹಬಾಳ್ವೆಗೆ ವಿವೇಕಯುತವಾದ ಸಿದ್ಧತೆಯನ್ನೇನು ಮಾಡಿಕೊಳ್ಳುತ್ತಿದೆ ಎಂದು ಆಲೋಚಿಸುವಾಗ, ಅಮೆರಿಕದಲ್ಲಿ ಕಳೆದ ಜೂನ್ ೨೧ರಿಂದ ೨೩, ಮೂರು ದಿನ ನಡೆದ ಒಂದು ಅಭೂತಪೂರ್ವ ಐತಿಹಾಸಿಕ ಘಟನೆ ಗಮನಕ್ಕೆ ಬರುತ್ತದೆ. ಪ್ರಪಂಚದಲ್ಲಿ ಪ್ರಪ್ರಥಮ ಬಾರಿಗೆ ೧೮೯೩ರಲ್ಲಿ ವಿಶ್ವದ ಎಲ್ಲ ಮುಖ್ಯವಾದ ಮತ

*ಪರಿಶುದ್ಧರಾದ ಭಕ್ತರೂ ಪವಿತ್ರಾತ್ಮರಾದ ಸಂತರೂ ಒಂದು ಕಡೆ ಸೇರಿ ಕೆಲಹೊತ್ತು ಕುಳಿತರೂ ಸಾಕು—ಅಲ್ಲಿ ಆಧ್ಯಾತ್ಮದ ವಿಶೇಷ ಶಕ್ತಿ ಉಗಮವಾಗಿ ಆ ಸತ್ಸಂಗದಲ್ಲಿ ದಿವ್ಯತರಂಗಗಳೇ ತುಂಬಿರುತ್ತವೆ. ಸಂತರು ಯಾವ ಬೋಧನೆ ಮಾಡದಿದ್ದರೂ, ಸುಮ್ಮನೆ ಮೂರು ದಿನ ಮೌನದಿಂದ ಇಲ್ಲಿ ಉಪಸ್ಥಿತರಿದ್ದರೆ ಸಾಕು, ಮನ ಉನ್ನತ ಭಾವಸ್ಥಿತಿಗೇರುವ ಸಾಧನಾಸ್ಫೂರ್ತಿಯುಂಟಾಗುವ ಅನುಭವವನ್ನು ಮನೆಯಲ್ಲಿರುವ ಇತರ ಜನ ಪಡೆಯುತ್ತಾರೆ—ಇದು ಭಾರತೀಯರ ನಂಬಿಕೆ.*

*— ಸಮಾವೇಶದಲ್ಲಿ ಭಾಗವಹಿಸಿದ ಷಿಕಾಗೊ ವಿಶ್ವವಿದ್ಯಾಲಯದ ಹಿಂದಿ ಉಪನ್ಯಾಸಕ ಶ್ರೀ ಮಿಥಿಲೇಶ ಮಿಶ್ರ*

ಧರ್ಮಗಳ ಸಮ್ಮೇಳನವನ್ನು ಏರ್ಪಡಿಸಿ ಜಗತ್ಪ್ರಸಿದ್ಧ ಜಾಗ್ರತ ಸ್ಥಳ, ಅಮೆರಿಕದ ಹೃದಯಮಿಡಿತದ ಮುಖ್ಯನಾಡಿ ಎಂದೆನಿಸಿರುವ ಷಿಕಾಗೊ ನಗರವೇ ಈ ಘಟನೆಯ ರೂವಾರಿಯಾಗಿರುವುದು ಅರ್ಥಗರ್ಭಿತವಾಗಿದೆ.

"ಮೂರನೆ ಸಹಸ್ರಮಾನದಲ್ಲಿ ವೇದಾಂತ" ಎಂಬ ವಿಷಯವನ್ನು ಚರ್ಚಿಸುವುದಕ್ಕಾಗಿ ಸ್ವಾಮಿ ಚಿದಾನಂದ ಮಹಾರಾಜ್ ಅವರು ಅಧ್ಯಕ್ಷರಾಗಿರುವ "ಶ್ರೀವಿವೇಕಾನಂದ ವೇದಾಂತ ಸಂಘ" (ರಾಮಕೃಷ್ಣ ಮಹಾಸಂಘದ ಒಂದು ಕೇಂದ್ರ) ಭಕ್ತರ ಈ ಮಹಾ ಸಮಾವೇಶವನ್ನು ಏರ್ಪಡಿಸಿತ್ತು. ೧೯೮೭ರಲ್ಲಿ ಇದೇ ನಗರದಲ್ಲಿ "ವೇದಾಂತ ಸಮ್ಮೇಳನ" ನಡೆದಿತ್ತು. ಅದರ ನಂತರ ಇನ್ನೂ ಬಹು ದೊಡ್ಡ ಪ್ರಮಾಣದಲ್ಲಿ ಈ ಸಮಾವೇಶ ನಡೆಯಿತು. ಹೊಸ ಸಹಸ್ರಮಾನವನ್ನು ಸ್ವಾಗತಿಸುವ ಇನ್ನೂ ಒಂದೆರಡು ಉಲ್ಲೇಖಾರ್ಹ ಸಮಾರಂಭಗಳು ಅಮೆರಿಕದಲ್ಲಿ ನಡೆದವು. ೨೦೦೦ ವರ್ಷ ಆರಂಭವಾಗುತ್ತಿದ್ದಂತೆ ಷಿಕಾಗೊ ನಗರ ಪಾಲಿಕೆ "ಅಂತರ ರಾಷ್ಟ್ರೀಯ ಸಹಸ್ರಮಾನದ ಔತಣ"ವನ್ನೇರ್ಪಡಿಸಿ ಸುಮಾರು ೨೦೦ ದೇಶಗಳಿಗೆ ಆಹ್ವಾನ ಕಳಿಸಿತು. ಅಲ್ಲಿಂದ ಬಂದ ಎಲ್ಲ ಪ್ರತಿನಿಧಿಗಳ ಪ್ರಯಾಣ ಮತ್ತು ಆತಿಥ್ಯದ ಸಂಪೂರ್ಣ ಖರ್ಚನ್ನು ತಾನೆ ಭರಿಸಿತು. ಭಾರತದ ಪ್ರತಿನಿಧಿಯಾಗಿ ರಾಜಕೋಟ್ ರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಸ್ವಾಮಿ ಜಿತಾತ್ಮಾನಂದಜಿಯವರು ಈ ಸಮಾವೇಶದಲ್ಲಿ ಭಾಗವಹಿಸಿದರು.

ಅದೇ ವರ್ಷದ ಆಗಸ್ಟ್ ತಿಂಗಳಿನಲ್ಲಿ ವಿಶ್ವಸಂಸ್ಥೆ ಸಹಸ್ರಮಾನದ ತುಂಗ ಶಾಂತಿ ಸಮ್ಮೇಳನವನ್ನು ನಡೆಸಿತು. ವಿಶ್ವದ ಎಲ್ಲ ಕಡೆಗಳಿಂದ ಸಾವಿರಕ್ಕೂ ಹೆಚ್ಚು ಧಾರ್ಮಿಕ ನಾಯಕರು ಆಧ್ಯಾತ್ಮಿಕ ಗುರುಗಳು ಬಂದು ಭಾಗವಹಿಸಿದರು. ಇದರಲ್ಲಿಯೂ ಶ್ರೀ ರಾಮಕೃಷ್ಣ ಮಹಾಸಂಘದ ಮಹಾಧ್ಯಕ್ಷರ ಪ್ರತಿನಿಧಿಯಾಗಿ ಸ್ವಾಮಿ ಜಿತಾತ್ಮಾನಂದಜೀಯವರೇ ಭಾಗವಹಿಸಿ, ಹೊಸ ಸಹಸ್ರಮಾನದಲ್ಲಿ ವಿಶ್ವದ ಶಾಂತಿ ಮತ್ತು ಸಾಮರಸ್ಯಗಳಿಗಾಗಿ ಮಾಡುವ ಪ್ರಯತ್ನಗಳಲ್ಲಿ ಶ್ರೀರಾಮಕೃಷ್ಣ-ವಿವೇಕಾನಂದ ಪ್ರಣೀತವಾದ ಅನುಷ್ಠಾನ ವೇದಾಂತ ತತ್ತ್ವಗಳ ಅಗತ್ಯವನ್ನು ಜಾಗತಿಕ ಪ್ರತಿನಿಧಿಗಳೆಲ್ಲರ ಗಮನಕ್ಕೆ ತಂದರು.

ಈ ಹಿನ್ನೆಲೆಯಲ್ಲಿ ೨೦೦೧ ಸಾಲಿನ ಜೂನ್ ೨೨-೨೪ ಮೂರು ದಿನಗಳ ವಿಶೇಷ ಸಮಾವೇಶವನ್ನು ಷಿಕಾಗೋದ ವಿವೇಕಾನಂದ ವೇದಾಂತ ಸಂಘ ನಡೆಸಿತು. ಸಮಾವೇಶದ ಶೀರ್ಷಿಕೆ : "ಮೂರನೆ **ಸಹಸ್ರಮಾನದಲ್ಲಿ ವೇದಾಂತ**". ಅಮೆರಿಕ ಸಂಯುಕ್ತ ಸಂಸ್ಥಾನಗಳ ವಿವಿಧ ಭಾಗಗಳಿಂದ, ಕೆನಡಾ, ದಕ್ಷಿಣ ಅಮೆರಿಕ, ದಕ್ಷಿಣ ಆಫ್ರಿಕ, ಟ್ರಿನಿಡಾಡ್ ಮತ್ತು ಭಾರತ ದೇಶಗಳಿಂದ ೬೦೦ ಜನ ಪ್ರತಿನಿಧಿಗಳೂ ಸ್ಥಳೀಯರು ಸುಮಾರು ೨೦೦ ಜನ ಭಕ್ತರೂ ಈ ಸಮಾವೇಶದಲ್ಲಿ ಭಾಗವಹಿಸಿದರು. ಅಮೆರಿಕ ಮತ್ತು ಕೆನಡಾ ದೇಶಗಳಲ್ಲಿರುವ ಶ್ರೀರಾಮಕೃಷ್ಣ ಮಿಷನ್ ಕೇಂದ್ರಗಳಿಂದ ಮತ್ತು ಭಾರತದಿಂದ ಒಟ್ಟು ೧೪ ಜನ ಹಿರಿಯ ಸಾಧುಗಳು ಸಮಾವೇಶಕ್ಕೆ ಬಂದು ಉಪನ್ಯಾಸಗಳನ್ನು ನೀಡಿದುದು ಇನ್ನೊಂದು ಭಾಗ್ಯವಿಶೇಷ. ಮಾನವ ಕುಲ ಮೂರನೆ ಸಹಸ್ರಮಾನಕ್ಕೆ ಕಾಲಿರಿಸುತ್ತಿರುವ ಪ್ರಥಮದಲ್ಲೇ ಮುಂಬರುವ ಸತ್ಯ ಹಾಗೂ ಧರ್ಮಯುಗಕ್ಕೆ ಅಧ್ಯಾತ್ಮದ ಅಡಿಪಾಯ ಹಾಕಲು ಯಾವ ಅಮೂಲ್ಯ ತತ್ತ್ವಗಳು ಉಪಯುಕ್ತವಾಗಬಲ್ಲವು ಎಂಬುದನ್ನು ನಿರ್ಣಯಿಸುವ ಅಭೂತಪೂರ್ವ ಮಹತ್ವದ ಸಮಾವೇಶ ಇದು.

ಪಶ್ಚಿಮ ಭಾಗದ ಮಿಚಿಗನ್ ಒಂದು ಸಣ್ಣ ಊರು. ಭಾರತದ ಪುಣ್ಯನದಿ "ಗಂಗಾ"ಮಾತೆಯ ಪವಿತ್ರವಾದ ನೆನಪು ಬರಲಿ ಎಂದು ಇಲ್ಲಿನ ಸುಂದರವಾದ ಗ್ರಾಮೀಣ ಪರಿಸರದ, ಪ್ರಶಾಂತಿ ತುಂಬಿದ ಆಶ್ರಮ ಸ್ಥಳಕ್ಕೆ "ಗಂಗಾ" ಎಂದೇ ಹೆಸರಿಟ್ಟಿದ್ದಾರೆ. ೧೧೦ ಎಕರೆ ವಿಸ್ತೀರ್ಣದ ಈ ವನಪ್ರಾಂತದ ಮಧ್ಯೆ ವಿವೇಕಾನಂದ ಆಶ್ರಮ ಕಂಗೊಳಿಸುತ್ತಿದೆ. ಇಲ್ಲಿ ನಿತ್ಯವೂ ನಡೆಯುವ ಭಜನೆ, ಉಪನ್ಯಾಸ, ಪ್ರವಚನ, ಜಪ-ತಪ-ಧ್ಯಾನಗಳಿಂದಾಗಿ ಇಡೀ ವಾತಾವರಣ ಪವಿತ್ರಭಾವತರಂಗಿತವಾಗಿದೆ. ಅಧ್ಯಾತ್ಮ ಸಾಧನಾ ಶಿಬಿರಗಳಿಗೆ ಏಕಾಂತ ಧ್ಯಾನ-ಯೋಗ ಸಾಧನೆಗಳಿಗೆ ಸುಯೋಗ್ಯವಾಗಿದೆ. ಇಲ್ಲಿ ೬೦೦-೮೦೦ ಜನ ಕುಳಿತುಕೊಳ್ಳಲು ಅನುಕೂಲವಾದ "ಸಹಸ್ರಮಾನ ಮಂಟಪ" (Millennium Hall) ಎಂಬ ವಿಶಾಲವಾದ ಸಭಾಂಗಣದಲ್ಲಿ ಕಾರ್ಯಕ್ರಮ ೨೨ರ ಶುಭ ಪ್ರಾತಃಕಾಲ ಆರಂಭವಾಯಿತು. ವೇದಿಕೆಯ ಮೇಲೆ ಅರ್ಧಚಂದ್ರಾಕೃತಿಯಲ್ಲಿ ಇರಿಸಿದ ಪೀಠಾಸನಗಳ ಮೇಲೆ ಕೇಸರಿವರ್ಣದ ಕಾಷಾಯವಸ್ತ್ರಧಾರಿಗಳಾದ ಸ್ವಾಮಿಗಳು ಮಂದಹಾಸಯುಕ್ತ ಪ್ರಸನ್ನವದನರಾಗಿ ಆಸೀನರಾಗಿದ್ದಾರೆ. ಹಿನ್ನೆಲೆಯಲ್ಲಿ ಮೇಲ್ಗಡೆ ಮಧ್ಯೆ ವೃತ್ತಾಕಾರದ ಶ್ರೀರಾಮಕೃಷ್ಣ ಮಹಾಸಂಘದ ಲಾಂಛನ. ಅದರ ಕೆಳಗೆ ದೊಡ್ಡ ಅಕ್ಷರಗಳಲ್ಲಿ "VEDANTA IN THE THIRD MILLENNIUM" June 22-24, 2001 ಎಂಬ ಫಲಕ. ಅದರ ಬಲ ಪಕ್ಕದಲ್ಲಿ ಶ್ರೀರಾಮಕೃಷ್ಣ-ಶ್ರೀಶಾರದಾಮಾತೆಯರ ದೊಡ್ಡ ಗಾತ್ರದ ಭಾವಚಿತ್ರಗಳು. ಎಡ ಪಕ್ಕದಲ್ಲಿ ಪದ್ಮಾಸನಸ್ಥಿತ ಧ್ಯಾನಸ್ಥ ಸ್ವಾಮಿ ವಿವೇಕಾನಂದರ ಭಾವಚಿತ್ರ. ಭವ್ಯವಾದ ವೇದಿಕೆಯ ನೋಟ! ಭಕ್ತರಿಂದ ತುಂಬಿದ ಪ್ರೇಕ್ಷಕಾಂಗಣ!

ಸಮಾವೇಶ-ವಿಚಾರ ಸಂಕಿರಣ-ಕಾರ್ಯಕ್ರಮಗಳನ್ನು ಉದ್ಘಾಟನೆ ಮಾಡಲು, ಭಾರತದಿಂದ ಚೆನ್ನೈ ನಗರದ ಶ್ರೀರಾಮಕೃಷ್ಣ ಮಠದ ಅಧ್ಯಕ್ಷರೂ, ರಾಮಕೃಷ್ಣ ಮಠ-ರಾಮಕೃಷ್ಣ ಮಿಷನ್‌ನ ಟ್ರಸ್ಟಿಗಳೂ ಆಗಿರುವ ಪೂಜ್ಯ ಸ್ವಾಮಿ ಗೌತಮಾನಂದಜಿ ಮಹಾರಾಜ್ ಗೌರವಾನ್ವಿತ ಮುಖ್ಯ ಅತಿಥಿಗಳಾಗಿ ಆಹ್ವಾನಿತರಾಗಿದ್ದರು. ಅವರೂ ಅಲ್ಲಿ ಆಸೀನರಾಗಿದ್ದರು. ಷಿಕಾಗೊದ ವಿವೇಕಾನಂದ ವೇದಾಂತ ಸಂಘದ ಹಾಲಿ ಅಧ್ಯಕ್ಷರಾದ ಸ್ವಾಮಿ ಚಿದಾನಂದಜಿ ಮಹಾರಾಜರು ಪ್ರಾರ್ಥನಾಶ್ಲೋಕವನ್ನು ಹಾಡಿದರು. ನಂತರ ಎಲ್ಲರನ್ನೂ ಹಾರ್ದಿಕವಾಗಿ ಪ್ರೀತಿಯಿಂದ ಸ್ವಾಗತಿಸಿ, ವೇದಿಕೆಯ ಮೇಲೆ ಆಸೀನರಾಗಿದ್ದ ಎಲ್ಲ ಸ್ವಾಮಿಗಳನ್ನೂ ಸಭೆಗೆ ಪರಿಚಯಿಸಿದರು. ಮೂರು ದಿನಗಳ ಸಮಾವೇಶ-ವಿಚಾರ ಸಂಕಿರಣಗಳ ಪ್ರಾಮುಖ್ಯವನ್ನೂ ಧ್ಯೇಯೋದ್ದೇಶವನ್ನೂ ವಿವರಿಸಿದರು.




ಧಾರ್ಮಿಕ ಸಮಾವೇಶದಲ್ಲಿ ಸ್ವಾಮೀಜಿಯವರುಗಳು

ಆ ಬಳಿಕ ಪೂಜ್ಯ ಸ್ವಾಮಿ ಗೌತಮಾನಂದ ಮಹಾರಾಜ್ ಜ್ಯೋತಿ ಬೆಳಗಿಸಿ ಮೂರೂ ದಿನಗಳ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮೊದಲನೆ ದಿನದ ಉಪನ್ಯಾಸ-ಚರ್ಚೆ-ಕಾರ್ಯಕ್ರಮವನ್ನು ಅವರೇ ನಡೆಸಿಕೊಟ್ಟುದಲ್ಲದೆ ಮುಂದಿನ ಎರಡೂ ದಿನ ಎಲ್ಲ ಉಪನ್ಯಾಸ ಮತ್ತು ಮುಕ್ತ ಚರ್ಚೆಗಳ ಅಧ್ಯಕ್ಷತೆಯನ್ನೂ ಅವರೇ ವಹಿಸಿದ್ದರು. ವಿದ್ವತ್ಪೂರ್ಣವಾದ ಜ್ಞಾನ-ಅನುಭವಗಳಿಂದ ಪರಿಪಾಕಗೊಂಡ ಅವರ ವಿವೇಕಯುತ ನುಡಿಗಳೂ ಅರ್ಥಗರ್ಭಿತ ಟಿಪ್ಪಣಿಗಳೂ ಕಡೆಯ ದಿನ ಸಮಾರೋಪ ಭಾಷಣ ಮಾಡಿ ಮಂಡಿಸಿದ ಪಂಚ ಸೂತ್ರಗಳೂ ಸಭಿಕರೆಲ್ಲರ ಮನವನ್ನು ಸೂರೆಗೊಂಡುದಲ್ಲದೆ ವೇದಾಂತ ದೃಷ್ಟಿಕೋನದ ಜೀವನತತ್ತ್ವಗಳನ್ನು ಕುರಿತ ಅವರ ತಿಳಿವಳಿಕೆಯನ್ನು ಶ್ರೀಮಂತಗೊಳಿಸಿದವು.

ಮೂರೂ ದಿನಗಳು ಕಾಲಕ್ಕೆ ಸರಿಯಾಗಿ ಅಧ್ಯಾತ್ಮ ಶಿಬಿರದ ವೇಳಾ ಪಟ್ಟಿಯಂತೆ ಕರಾರುವಾಕ್ಕಾಗಿ ದಿನಚರಿ : ೫.೧೫ ಉಷಃಕಾಲದಲ್ಲಿ ಧ್ಯಾನ, ಪ್ರಾರ್ಥನೆ; ೬ಕ್ಕೆ ಆರತಿ; ೭.೩೦ಕ್ಕೆ ಉಪಾಹಾರ; ೯ರಿಂದ ೧೨ ಉಪನ್ಯಾಸಗಳು ; ನಂತರ ಭೋಜನ ವಿರಾಮ; ಮತ್ತೆ ಉಪನ್ಯಾಸ, ಚರ್ಚೆ, ತದನಂತರ ಬಿಡುವಿದ್ದು ಆ ವೇಳೆಯಲ್ಲಿ ಭಕ್ತರು ತಮ್ಮ ವೈಯಕ್ತಿಕ ಸಾಧನೆಯ ಬಗ್ಗೆ, ಮನಸ್ಸಿನಲ್ಲೇಳುವ ಪ್ರಶ್ನೆ, ಸಂದೇಹಗಳ ಬಗ್ಗೆ ಸ್ವಾಮಿಗಳಲ್ಲಿ ಯಾರನ್ನಾದರೂ ವೈಯಕ್ತಿಕವಾಗಿ ಭೆಟ್ಟಿಯಾಗಿ ಮಾತಾಡಿಸಿ ಸಲಹೆ ಮಾರ್ಗದರ್ಶನಗಳನ್ನು ಪಡೆಯಲು ಅವಕಾಶ. ಆಶ್ರಮದ ಸಸ್ಯಶಾಮಲ ಉದ್ಯಾನದ ಹಸಿರು ಹಾಸಿನ ಮೇಲೆ ಬೇರೆ ಬೇರೆ ಕಡೆ ಒಬ್ಬೊಬ್ಬ ಸ್ವಾಮೀಜಿಯ ಸುತ್ತ ಅಷ್ಟಷ್ಟು ಜನ ಭಕ್ತರು ಕುಳಿತು ಅಲ್ಲಿ ಅಧ್ಯಾತ್ಮ-ಸಾಧನೆ ವಿಚಾರದ ಸಂವಾದ, ಪ್ರಶ್ನೋತ್ತರ ನಡೆಯುವ ನೋಟ ಸಾಮಾನ್ಯವಾಗಿತ್ತು.

ಪ್ರತಿಯೊಂದು ಗೋಷ್ಠಿ ಆರಂಭವಾಗುವ ಮೊದಲು, ಉಪನ್ಯಾಸಗಳ ನಡುವೆ, ಸ್ವಲ್ಪ ಹೊತ್ತು ಡಾ. ರಾಮ್‌ಬಾಲಾ ಮತ್ತು ತಂಡದವರಿಂದ ಭಕ್ತಿಗೀತೆಗಳ ಗಾಯನವಿರುತ್ತಿತ್ತು. ಮಧುರವಾದ ಭಾವಪೂರ್ಣವಾದ ಗಾಯನದ ಪರಿಣಾಮವಾಗಿ ಇಡೀ ವಾತಾವರಣ ಅಧ್ಯಾತ್ಮ ತರಂಗಗಳಿಂದ ತುಂಬಿ ಎಲ್ಲರಲ್ಲೂ ಪವಿತ್ರತೆಯ ಭಾವ ಸ್ಥಿತಿಯುಂಟಾಗುತ್ತಿತ್ತು. ಅನಂತರದ ಉಪನ್ಯಾಸಗಳಿಗೆ-ಚರ್ಚೆ-ವಿಚಾರ ವಿನಿಮಯಗಳಿಗೆ ಸೂಕ್ತ ಅಧ್ಯಾತ್ಮ ವಾತಾವರಣ ಸೃಷ್ಟಿಯಾಗುತ್ತಿತ್ತು.

ಸಮಾವೇಶದಲ್ಲಿ ಉಪನ್ಯಾಸಕರಾಗಿ, ಸಾಧಕರಿಗೆ ಭಕ್ತರಿಗೆ ಮಾರ್ಗದರ್ಶಕರಾಗಿ, ಎಲ್ಲ ಸಭಿಕರ ಪ್ರೀತಿ-ಗೌರವಗಳನ್ನು ಸಂಪಾದಿಸಿದ ಹನ್ನೆರಡು ಜನ ಸ್ವಾಮೀಜಿಯವರುಗಳು ಶ್ರೀರಾಮಕೃಷ್ಣ-ವಿವೇಕಾನಂದ ಪ್ರಣೀತವಾದ ವೇದಾಂತದ ವಿವಿಧ ಅಂಶಗಳನ್ನು ಎತ್ತಿಕೊಂಡು, ಆಧುನಿಕ ವಿಜ್ಞಾನ-ತಂತ್ರಜ್ಞಾನಗಳ ಬೆಳಕಿನಲ್ಲಿ ವಿಶ್ಲೇಷಿಸಿ ಸೊಗಸಾದ ಉಪನ್ಯಾಸಗಳನ್ನು ನೀಡಿದರು. ಸಭಿಕರೆಲ್ಲರಿಗೂ ಅಧ್ಯಾತ್ಮದ ರಸದೌತಣವಾಯಿತು, ರುಚಿ-ಪುಷ್ಟಿ-ತುಷ್ಟಿಗಳು ದೊರೆತವು.

ದೈನಂದಿನ ಲೌಕಿಕ ಜೀವನ ಸುಲಲಿತವೂ ಸುಖಮಯವೂ ಸಾರ್ಥಕವೂ ಆಗುವ ಹಾಗೆ ಪ್ರತಿಯೊಬ್ಬರೂ ಹೇಗೆ ವೇದಾಂತ ಮನೋಧರ್ಮವನ್ನು ಬೆಳೆಸಿಕೊಳ್ಳಬಹುದು? ವೇದಾಂತದ ಆದರ್ಶಗಳನ್ನು ಬದುಕಿಗೆ ಅಳವಡಿಸಿ ನಿತ್ಯದ ನಡೆ-ನುಡಿಗಳಲ್ಲಿ ಅವು ವ್ಯಕ್ತವಾಗುವಂತೆ ಮಾಡುವುದು ಹೇಗೆ? ಎಂಬೀ ವಿಚಾರಗಳನ್ನು ಮನವರಿಕೆ ಮಾಡಿಕೊಡುವುದೇ ಎಲ್ಲ ಉಪನ್ಯಾಸಗಳ ತಾತ್ಪರ್ಯವಾಗಿತ್ತು. ಕೇಳಿದ ಸಭಿಕರ ಮೇಲೆ ಅವು ಗಾಢವಾದ ಪ್ರಭಾವ ಬೀರಿದವು. ತಮ್ಮ ತಮ್ಮ ಊರುಗಳಿಗೆ ಹಿಂತಿರುಗಿದ ಮೇಲೆ ತಮ್ಮ ಜೀವನ ಶೈಲಿಯನ್ನೇ ಈ ಹೊಸಬೆಳಕಿನಲ್ಲಿ ಬದಲಾಯಿಸಿಕೊಳ್ಳಬೇಕು, ಈಗ ಉಂಟಾದ ಸತ್ಸಂಕಲ್ಪಗಳನ್ನು ಕಾರ್ಯಗತ ಮಾಡಿಬಿಡಬೇಕು ಎಂಬ ಸ್ಫೂರ್ತಿ ಉತ್ಸಾಹಗಳು ಅವರಲ್ಲಿ ಉಂಟಾದವು. ಇಷ್ಟೇ ಅಲ್ಲದೆ, ವೈಯಕ್ತಿಕ ಸಾಧನೆಗೆ ಅಗತ್ಯವಾದ ಸಲಹೆ-ಮಾರ್ಗದರ್ಶನಗಳಿಗೆ ಹೆಚ್ಚು ಗಮನ ಕೊಟ್ಟದ್ದು ಇಡೀ ಕಾರ್ಯಕ್ರಮದ ವಿಶೇಷ.

ಎರಡನೆ ದಿನ ಸಂಜೆ ಹೊತ್ತು ಸೇಂಟ್ ಲೂಯಿ ವೇದಾಂತ ಸಂಘದ ಸ್ವಾಮಿ ಚೇತನಾನಂದಜಿಯವರು ವರ್ಣ ಪಾರದರ್ಶಕಗಳನ್ನು (Slide Show) ತೆರೆಯ ಮೇಲೆ ಬಿಂಬಿಸಿ ತೋರಿಸಿದರು. ಶ್ರೀರಾಮಕೃಷ್ಣ ಪರಮಹಂಸರ ಅಪರೂಪದ ಛಾಯಾಚಿತ್ರಗಳು, ಅವರ ಜನ್ಮಸ್ಥಳವಾದ ಕಾಮಾರಪುಕುರ ಹಾಗೂ ಸಾಧನಾರಂಗವಾದ ದಕ್ಷಿಣೇಶ್ವರದ ಚಿತ್ರಗಳು ಪ್ರದರ್ಶಿತವಾದವು. ತೆರೆಯ ಮೇಲೆ ಮೂಡಿದ ಒಂದೊಂದು ಚಿತ್ರವನ್ನೂ ಕುರಿತು ಸ್ವಾಮೀಜಿ ನೀಡಿದ ವಿವರಣೆ ತುಂಬಾ ಸ್ವಾರಸ್ಯಪೂರ್ಣವಾಗಿದ್ದು ಎಲ್ಲರ ಮನಸೆಳೆಯಿತು. ಈ ಪ್ರದರ್ಶನ ಬೋಧಪ್ರದವಾಗಿದ್ದಂತೆ ಸಂತೋಷದಾಯಕವೂ ಆಗಿತ್ತು.

ಮೂರನೆ ಹಾಗೂ ಮುಕ್ತಾಯದ ದಿನ ಬೆಳಿಗ್ಗೆ ಪೂಜ್ಯ ಸ್ವಾಮಿ ಗೌತಮಾನಂದರು ತಮ್ಮ ಸಮಾರೋಪ ಭಾಷಣದ ಕಡೆಯಲ್ಲಿ ಐದು ಆಧ್ಯಾತ್ಮ ಸೂತ್ರಗಳನ್ನು ಮುಂದಿಟ್ಟು ಹೊಸ ಸಹಸ್ರಮಾನದಲ್ಲಿ ಇವು ಲೋಕವ್ಯಾಪಕ ಮನ್ನಣೆಯನ್ನು ಪಡೆದಾವೆಂದು ಆಶಿಸಿದರು, ಹಾರೈಸಿದರು.

ಪಂಚಸೂತ್ರಗಳು:

೧. ವೈಚಾರಿಕತೆಯ ಮೇಲ್ಮೆ—ಮೂಢನಂಬಿಕೆಗಳಾಗಲಿ, ಕೆಲವು ಪುಸ್ತಕಗಳಾಗಲಿ, ಸಂಘ ಸಂಸ್ಥೆಗಳಾಗಲಿ ಯಾವುದೇ ಅಡ್ಡಿಯಾಗಿ ಬಂದರೂ ಎದುರಿಸಿ ಸತ್ಯವನ್ನು ಶೋಧಿಸಿ ಕಾಣಲೇಬೇಕೆಂಬ ಛಲ, ಧೈರ್ಯಗಳನ್ನು ವೈಚಾರಿಕತೆ ಒಳಗೊಂಡಿದೆ.

೨. ಎಲ್ಲ ಸಹಮಾನವರಲ್ಲೂ ಇರುವ ದೈವತ್ವವನ್ನು ಕಾಣಬೇಕು ಮತ್ತು ಸಮರ್ಪಣಭಾವದಿಂದ ಜನಾರ್ದನ ಸೇವೆಯೆಂಬಂತೆ ಜನತಾ ಸೇವೆಯನ್ನು ಮಾಡುವುದು.

೩. ದೇವರು ಪ್ರೇಮಸ್ವರೂಪ ಎಂದು ಪೂರ್ಣ ವಿಶ್ವಾಸವಿಟ್ಟು ದೇವರ ಬಗ್ಗೆ ಭಯವಿಲ್ಲದಿರುವುದು.

೪. ಇಂದ್ರಿಯಗಳಿಗೆ ದಾಸರನ್ನಾಗಿ ಮಾಡುವ ಅತಿಯಾದ ಭೋಗಲಾಲಸೆಯನ್ನು ಬಿಡುವುದು.

೫. ಭಗವತ್ಸಾಕ್ಷಾತ್ಕಾರವೊಂದೇ ಜೀವನದ ಪರಮಗುರಿ ಎಂದು ತಿಳಿದು ಬದುಕನ್ನು ಅದರ ಸಾಧನೆಯನ್ನಾಗಿ ಮಾಡಿಕೊಳ್ಳುವುದು.

ಜ್ಞಾನ ಮತ್ತು ಪ್ರೇಮಪೂರ್ಣವಾದ ಸೇವೆ ಇದು ಪರಿಪೂರ್ಣ ಮಾನವನ ಲಕ್ಷಣ ಎಂಬ ಭಾವನೆ ಬೆಳೆಯಬೇಕು ಎಂಬ ಇನ್ನೊಂದು ಮಾತನ್ನೂ ಸ್ವಾಮೀಜಿ ಸೇರಿಸಿದರು.

ಈ ಘಟನೆಯನ್ನು ಕುರಿತ ವಿಸ್ತೃತ ವರದಿ ಅಮೆರಿಕದ ಹಲವು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅನೇಕ ಕ್ರಿಶ್ಚಿಯನ್ನರೂ ಈ ಅಧಿವೇಶನದಲ್ಲಿ ಭಾಗವಹಿಸಿದ್ದರು. ಪ್ರೊಟೆಸ್ಟೆಂಟ್ ಚರ್ಚ್‌ಗೆ ಸೇರಿದ ಜಾನೆಟ್ ಪೂಲೆ ( Janet Poole), *New York Times* ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಹೇಳುತ್ತಾರೆ : " ಈ ಅಧಿವೇಶನ ನನ್ನ ಮೇಲೆ ಅದ್ಭುತ ಪರಿಣಾಮ ಉಂಟುಮಾಡಿದೆ. ನಾನು ಇದರ ಬಗ್ಗೆ ಆವಿಷ್ಕರಿಸುತ್ತಿದ್ದೇನೆ. ನಾನು ಏನು ಕಲಿಯುತ್ತಿರುವೆನೋ ಅದರಿಂದ ನಾನು ಮುಗ್ಧಳಾಗಿದ್ದೇನೆ. "

# ಪ್ರಹಸನ ಪ್ರಸಂಗ

ಹಿರಿಯರು, ಕಿರಿಯರು ಮತ್ತು ಮಧ್ಯವಯಸ್ಕರು ಎಲ್ಲ ಸೇರಿ ಒಂದು ಕುಟುಂಬವಾಗುತ್ತದೆ. ಎಲ್ಲರಿಗೂ ಕುಟುಂಬದಲ್ಲಿ ಉಚಿತವಾದ ಸ್ಥಾನವಿರಬೇಕು, ಯಾರನ್ನೂ ಕಡೆಗಣಿಸಬಾರದು. ಯಾರನ್ನಾದರೂ ತಿರಸ್ಕರಿಸುವುದೆಂದರೆ ನಮ್ಮನ್ನೇ ತಿರಸ್ಕರಿಸಿಕೊಂಡಂತೆ, ಏಕೆಂದರೆ ನಾವೆಲ್ಲರೂ ಕಿರಿ, ಮಧ್ಯ ಮತ್ತು ಹಿರಿ ವಯಸ್ಸಿನ ಅವಸ್ಥೆಗಳನ್ನು ಅನುಭವಿಸಿರುತ್ತೇವೆ ಅಥವಾ ಅನುಭವಿಸುತ್ತೇವೆ. ಆದ್ದರಿಂದ ಮನೆಯಲ್ಲಿ ಎಲ್ಲರಿಗೂ ಗೌರವ ಸ್ಥಾನವಿರಬೇಕು.

ಯುವ ದಂಪತಿಗಳಿಬ್ಬರೂ ತಮ್ಮ ಮಕ್ಕಳೊಡನೆ ಆನಂದದಿಂದ ವಾಸಿಸುತ್ತಿದ್ದರು. ಮನೆಯಲ್ಲಿ ಒಬ್ಬನೇ ಮುದುಕನಿದ್ದ—ಗಂಡನ ತಂದೆ. ಅವನಿಗೆ ಸ್ವಲ್ಪ ಅರಳು ಮರಳು. ಅವನಿಂದಾಗಿ ಈ ದಂಪತಿಗಳಿಗೆ ಸ್ವಲ್ಪ ಕಿರುಕುಳ. ತಮ್ಮ ಸುಖ ಜೀವನಕ್ಕೆ ಇವನು ಅಡ್ಡಿಯಾಗಿದ್ದಾನೆ ಎಂಬುದು ಅವರ ಭಾವನೆ. ಇವನನ್ನು ಮನೆಯಿಂದ ದೂರ ಸಾಗಹಾಕುವುದೇ ಒಳ್ಳೆಯದೆಂದು ದಂಪತಿಗಳು ನಿರ್ಣಯಕ್ಕೆ ಬಂದರು. ಆ ಯುವಕ ಮುದುಕನನ್ನು ಒಂದು ದೊಡ್ಡ ಬುಟ್ಟಿಯಲ್ಲಿ ಕೂರಿಸಿ ಅದನ್ನು ತಲೆಯಮೇಲೆ ಹೊತ್ತುಕೊಂಡು ಮನೆಯಿಂದ ಹೊರಟ.

ಅವನು ಹೋಗುವುದನ್ನೇ ಗಮನಿಸುತ್ತಿದ್ದ ಅವನ ಮಗ—ಇನ್ನೂ ಬಾಲಕ—ತಂದೆಯನ್ನು ಕೇಳಿದ: "ಅಪ್ಪ, ಅಜ್ಜನನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿರುವೆ?"

"ಅವನ ಪಾಡಿಗೆ ಅವನಿರಲಿ ಎಂದು ಅವನನ್ನು ಪರ್ವತಪ್ರದೇಶದಲ್ಲಿ ಬಿಟ್ಟು ಬರುತ್ತಿದ್ದೇನೆ" ಎಂದು ತಂದೆ ಉತ್ತರಿಸಿದ.

ಬಾಲಕ ಸುಮ್ಮನಾದ. ತಂದೆ ತನ್ನ ಪ್ರಯಾಣ ಮುಂದುವರಿಸಿದ. ಅವನು ನಾಲ್ಕು ಹೆಜ್ಜೆ ಮುಂದುವರಿಯುತ್ತಿದ್ದಂತೆಯೇ ಬಾಲಕ ತಂದೆಯನ್ನು ಕುರಿತು ಹೇಳಿದ : "ಅಪ್ಪ, ಆ ಬುಟ್ಟಿಯನ್ನು ವಾಪಸು ತರುವುದನ್ನು ಮರೆಯಬೇಡ."

ತಂದೆಗೆ ಆಶ್ಚರ್ಯ. ಅವನು ಹಿಂತಿರುಗಿ, " ಏಕೆ "ಎಂದು ಮಗನನ್ನು ಕೇಳಿದ. "ನೋಡು ಅಪ್ಪ, ನೀನು ಮುಂದೆ ಮುದುಕನಾದಾಗ ನಿನ್ನನ್ನೂ ಇದೇ ರೀತಿ ದೂರ ಹೊತ್ತುಕೊಂಡು ಹೋಗಿ ಬಿಡುವುದಕ್ಕೆ ಆ ಬುಟ್ಟಿ ಬೇಕಾಗುತ್ತದೆ."

ಆ ವ್ಯಕ್ತಿಗೆ ಬರೆ ಮುಟ್ಟಿಸಿದಂತಾಯಿತು. ಕೂಡಲೆ ಅವನು ತನ್ನ ತಂದೆಯನ್ನು ಮನೆಗೆ ಕರೆದುಕೊಂಡುಹೋದ ಮತ್ತು ಆದರದಿಂದ ನೋಡಿಕೊಳ್ಳತೊಡಗಿದ.